# 24. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಂಕ್ಲಾಪುರ ತೀರ್ಥಹಳ್ಳಿ ತಾ!!

ಮನುಷ್ಯನಾದ ಮೇಲೆ ವ್ಯಕ್ತಿಯು ಒಂದು ಗುರಿಯನ್ನು ಹೊಂದಿರಬೇಕು ಆ ಗುರಿಯನ್ನು ಈಡೇರಿಸಲು ಅನೇಕ ಪ್ರಯತ್ನಗಳನ್ನು ಮಾಡಬೇಕು. ಕೆಲವು ಪ್ರಯತ್ನಗಳು ಗುರಿಗಳನ್ನು ಈಡೇರಿಸದರೆ ಹಲವು ಗುರಿಯನ್ನು ತಲುಪಿಸುತ್ತವೆ. ಹಾಗೇಯೇ ಶಾಲೆ ಎಂದ ಮೇಲೆ ಆ ಶಾಲೆಯ ಶಿಕ್ಷಕ ವೃಂದ SDMC ಯವರು ಆನೇಕ ಗುರಿಗಳನ್ನು ಇಟ್ಟುಕೊಳ್ಳಬೇಕು. ಅವುಗಳನ್ನು ತಲುಪಲು ವಿವಧ ಪ್ರಯತ್ನಗಳನ್ನು ಮಾಡಬೇಕು. ಈ ಸಲುವಾಗಿ ನಮ್ಮ ಶಾಲೆಯು ಒಂದು ಘೋಷವಾಕ್ಯ ಇಟ್ಟುಕೊಂಡು ಹಲವಾರು ಕಾರ್ಯಕ್ರಮ ಜಾರಿಗೊಳಿಸುತ್ತಾ ಬಂದಿತು. ಆ ಘೋಷ ವಾಕ್ಯವೇ **" ನಮ್ಮ ಶಾಲೆ, ನಮ್ಮ ಹೆಮ್ಮೆ ನಮ್ಮ ಕನಸು"** ಇದರಡಿಯಲ್ಲಿ ಅನೇಕ ಗುರಿಗಳನ್ನು ಕನಸುಗಳನ್ನು ಕಂಡು ನನಸುಗೊಳಿಸುತ್ತಾ ಈಗ ಒಂದು ಹಂತ ಬಂದು ತಲುಪಿದ್ದೆವೆ. ಆ ಕನಸುಗಳೆಂಬ ಗುರಿಗಳು ಅವುಗಳನ್ನು ಸಾಕಾರಗೊಳಿಸಿದ ರೀತಿಯೇ ಈ ನಮ್ಮ ಶಾಲೆಯ ಯಶೋಗಾಥೆ.

## ಶಾಲೆಯ ಹಿನ್ನೆಲೆ

ನಮ್ಮ ಶಾಲೆಯ ಹೆಸರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸಂಕ್ಲಾಪುರ, ಕನ್ನಂಗಿ(ಕ್ಲಸ್ಟರ್) ತೀರ್ಥಹಳ್ಳಿ (ತಾ) ಶಿವಮೊಗ್ಗ (ಜಿ) ತಾಲೂಕು ಕೇಂದ್ರದಿಂದ ಸುಮಾರು 35 ಕೀ. ಮೀ ದೂರದ ಕಾಡಿನೊಳಗೆ ಇರುವ ಒಂದು ಪುಟ್ಟ ಶಾಲೆ. 1975ರಲ್ಲಿ ಸ್ಥಾಪನೆಯಾಯಿತು. ಹಾಲಿ ಇಲ್ಲಿ 1 ನೇ ತರಗತಿಯಿಂದ 5 ನೇತರಗತಿಯವರೆಗೆ ಮಕ್ಕಳು ಓದುತ್ತಿದ್ದು ಇಬ್ಬರು ಶಿಕ್ಷಕರಾದ **ಶ್ರೀ ಗೋವಿಂದಪ್ಪ ಜೆ** ಪ್ರಭಾರಿ ಮುಖ್ಯಗುರುಗಳಾಗಿ ಮತ್ತು **ರೇಣುಕಾರಾದ್ಯಾ P.P.** ಸಹಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 4 ವರ್ಷದ ಹಿಂದೆ 9 ಮಕ್ಕಳ ದಾಖಲಾತಿ ಹೊಂದಿದ್ದ ಶಾಲೆ ಈಗ 15 ಮಕ್ಕಳ ದಾಖಲಾತಿಗೆ ಏರಿದೆ. ಇಂದು ತೀರ್ಥಹಳ್ಳಿಯ ಅನೇಕ ಉತ್ತಮ ಶಾಲೆಗಳಲ್ಲಿ ಸಂಕ್ಲಾಪುರ ಶಾಲೆಯ ಒಂದಾಗಿದೆ. ತಾಲೂಕಿನಲ್ಲಿ ನಮ್ಮ ಶಾಲೆಗೆ ತನ್ನದೆಯಾದ ಛಾಪು ಮೂಡಿಸಿದೆ. ಮತ್ತೊಂದು ವಿಶೇಷವೆಂದರೆ ಇಲ್ಲಿ ವಾಸಿಸುವ ಜನರು ಶರಾವತಿ ನದಿ ನೀರು ಮುಳುಗಡೆ ನಿರಾಶ್ರಿತರ ಕುಟುಂಬಗಳು ಓದುತ್ತಿರುವ ಮಕ್ಕಳು ಈ ಕುಟುಂಬದವರೇ ಎಂಬುಂದು ವಿಶೇಷ.

## ಭೌತಿಕ ಸೌಲಭ್ಯಗಳು

### ❖ ಗೇಟ್ ಮತ್ತು ಕಾಂಪೌಂಡ್ ವ್ಯವಸ್ಥೆ :-

ಶಾಲೆಯು ವಿಶಾಲವಾದ ಆವರಣ ಹೊಂದಿದೆ. ಒಂದಿಷ್ಟು ಚಪ್ಪಡಿ ಕಲ್ಲಿನ ಕಾಂಪೌಂಡ್ ಒಂದಿಷ್ಟು ತಂತಿ ಕಂಬಗಳ ಬೇಲಿ ಹಾಕಿಸುವ ಮೂಲಕ ಶಾಲೆಯ ಒಳಗೆ ಯಾವ ಪ್ರಾಣಿಗಳೂ ಪ್ರವೇಶ ಪ್ರವೇಶಿಸದಂತೆ ವ್ಯವಸ್ಥೆ ಮಾಡಲಾಗಿದೆ 2 ಗೇಟ್ಗಳನ್ನು ಒಲಗೊಂಡಿದ್ದು ಒಂದು ದೊಡ್ಡ ಗೇಟ್ ಇದೆ ಮತ್ತೊಂದು ಮಕ್ಕಳು ದಾಡಲು ಚಿಕ್ಕ ಗೇಟ್ ವ್ಯವಸ್ಥೆ ಇದ್ದು ಅದಕ್ಕೆ ಬೀಗ ಹಾಕುವ ವ್ಯವಸ್ಥೆ ಹೊಂದಿದೆ.

### ಶಾಲಾ ಆವರಣ

ತುಂಬಾ ವಿಶಾಲವಾದ ಆವರಣ ಹೊಂದಿದ್ದು ಇದುವೇ ನಮ್ಮ ಶಾಲಾ ಮುಖ್ಯ ಆಕರ್ಷಣೆಯಾಗಿದೆ. ಶಾಲಾ ಆವರಣದಲ್ಲಿ ಏನೆಲ್ಲಾ ವಿಶೇಷತೆಗಳಿವೆ ಎಂಬುದನ್ನು ಒಂದೊಂದಾಗಿ ನೋಡುತ್ತಾ ಸಾಗೋಣ.

### ಅ) ಸುಂದರ ಕೈತೋಟ :-

ಶಾಲೆಯು ಸುಂದರ ಕೈತೋಟ ಒಳಗೊಂಡಿದೆ. ಈ ಕೈತೋಟದ ವಿಶೇಷತೆವೆಂದರೆ ಮುಂದಿನ ಕೆಲವು ವರ್ಷಗಳ ನಂತರ ಶಾಲೆಯು ತನ್ನದೆಯಾದ ವಾರ್ಷಿಕ ಆದಾಯವನ್ನು ಪಡೆಯಬೇಕು ಆ ಆದಾಯವು ಶಾಲೆಯ ಅಭೀವೃದ್ಧಿಗೆ ನೆರವಾಗಬೇಕೆಂದು ಒಂದು ಸುಂದರ ತೋಟವನ್ನೇ ನಿರ್ಮಿಸಲಾಗಿದೆ.

- ✓ 100 ಕ್ಕೂ ಹೆಚ್ಚಿನ ಆಡಿಕೆ ಮರಗಳು
- ✓ 20 ಕ್ಕೂ ಹೆಚ್ಚು ತೆಂಗಿನ ಮರಗಳು
- ✓ 30 ಕ್ಕೂ ಹೆಚ್ಚು ಬಾಲೆಗಿಡಗಳು
- ✓ 10 ಕ್ಕೂ ಹೆಚ್ಚು ಜಾತಿಯ ಗುಲಾಬಿ ಗಿಡಗಳು
- ✓ 15 ಕ್ಕೂ ಹೆಚ್ಚು ಮಾವಿನ ಮರಗಳು
- ✓ 03 ಪೇರಲೆ ಮರಗಳು
- ✓ 05 ಗೇರು ಮರಗಳು. ನಿಂಬೆ ಗಿಡ, ನುಗ್ಗೆಗಿಡ, ಹಾಗಲಬಳ್ಳಿ, ಸೌತೆಬಳ್ಳಿ, ಹೀರೆಬಳ್ಳಿ, ವಿವಿಧ ಸೊಪ್ಪುಗಳು, ಅಲಂಕಾರಿಕ ಗಿಡಗಳು, ದಾಸವಾಳ, ಮಲ್ಲಿಗೆ ಡೇರಿ, ಪಾರಿಜಾತ, ಬೆಟ್ಟದಾವರೆ ಮುಂತಾದ ಗಿಡಮರಗಳು ಅಲಂಕಾರಿಕ ಸಸ್ಯ ಪಪ್ಪಾಯಿ ಮಲೆನಾಡ ಸೇಬು ಸೀತಾ ಫಲ ಅನೇಕ ಜಾತಿಯ ಸಸಿಗಳು ಹಸಿರಿನಿಂದ ಕಂಗೊಳಿಸುತ್ತಿವೆ.

### ❖ ಮೀನಿನ ಕೊಳ :-

ಶಾಲೆಯ ಆವರಣಲ್ಲಿ ಸುಂದರವಾದ ಮೀನಿನ ಕೊಳವು ಇದೆ. ಅದರಲ್ಲಿ ಮೀನುಗಳು ಸ್ವಚ್ಛಂದವಾಗಿ ವಿಹರಿಸುತ್ತಿವೆ. ಮಕ್ಕಳ ಕಣ್ಣಿಗೆ ಅದು ಹಬ್ಬ ಇದು ಮಕ್ಕಳನ್ನಯ ಆಕರ್ಷಿಸುತ್ತಿದೆ.

### ❖ ಕಾರಂಜಿ ಕೊಳ :–

ಶಾಲೆಯ ಆವರಣಲ್ಲಿ ಕಾರಂಜಿಕೊಳವಿದ್ದು ನೀರಿನ ಕಾರಂಜಿಯು ಮಕ್ಕಳಿಗೆ ಖುಷಿ ನೀಡುವುದಲ್ಲದೆ. ಶಾಲಾ ಸೌಂದರ್ಯವನ್ನು ಅದರಲ್ಲಿ ವಿಹರಿಸುತ್ತಿದೆ. ಅಲ್ಲಿ ವಿವೇಕಾನಂದರ ವಿಗ್ರಹ ಪ್ರತಿಷ್ಠಪಿಸುವ ಗುರಿ ಹೊಂದಲಾಗಿದೆ.

### ❖ ಗೊಬ್ಬರ ಗುಂಡಿ :–

ಶಾಲೆಯಲ್ಲಿ ಸಂಗ್ರಹವಾಗುವ ಗಿಡದ ಉದುರಿದ ಎಲೆಗಳು ಅಡುಗೆ ಹಸಿ ಕಸ. ಮಿತ್ರ ಕಸಗಳನ್ನು ಈ ಗುಂಡಿಗೆ ಹಾಕಿ ಸಾವಯವ ಗೊಬ್ಬರ ತಯಾರಿಸಲಾಗುತ್ತದೆ. ಇದೇ ಗೊಬ್ಬರವನ್ನು ಅಡಿಕೆ ತೋಡದ ಗಿಡಗಳಿಗೆ ಗೊಬ್ಬರವಾಗಿ ಬಳಕೆ ಮಾಡಲಾಗುತ್ತದೆ.

### ❖ ಹನಿ ನೀರಾವರಿ ತುಂತುರು ನೀರಾವರಿ ವ್ಯವಸ್ಥೆ:-

ಶಾಲೆಯ ತೋಟಕ್ಕೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ರಜೆಯ ಸಂದರ್ಭಗಳಲ್ಲಿ ಸಸಿಗಳಿಗೆ ನೀರಿನ ಅಭಾವ ಉಂಟಾಗದಂತೆ ಸಾರ್ವಜನಿಕ ಕುಡಿಯುಚ ನೀರಿನ ಪೈಪ್ ಲೈನ್‌ಗೆ ಅಲ್ಲಿಯ ಶಾಲೆಯ ನಳಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ನಲ್ಲಿಯಲ್ಲಿ ನೀರು ಬಿಟ್ಟಾಗ ರಜೆಯ ವೇಳೆಯೂ ಹನಿನೀರಾವರಿ ಮೂಲಕ ನೀರು ಸರಬರಾಜಾಗಿ ಗಿಡಗಳಿಗೆ ನೀರುಣಿಸುತ್ತದೆ.

### ❖ ದಿವಾನ್ ಕಾಟು ಮತ್ತು ಟೇಬಲ್ : –

ಶಾಲಾ ಆವರಣದಲ್ಲಿ ಮಕ್ಕಳು ಕುಳಿತುಕೊಳ್ಳಲು ಕಸದಿಂದ ರಸ ಎಂಬಂತೆ ಬಿದ್ದ ಹಳೆಯ ಮರದ ತುಂಡು ಕತ್ತರಿಸಿ ವೃತ್ತಾಕಾರದ ಚಿಕ್ಕ ಟೇಬಲ್ ದಿವಾನ್ ಕಾಟಾ ಮಾಡಲಾಗಿದೆ. ಹಾಗೇಯೇ ಉದ್ದನೆಯ ಮರದ ಸಾರ್ವೆ ಬಳಸಿ ಮಕ್ಕಳು ಆಟಾಡಲು ಏರು ಪೇರು ಆಟೋಪಕರಣ  ಮಾಡಲಾಗಿದೆ.

### ❖ ಕಲಿಕಾ ಮರಗಳು :–

ಶಾಲೆಯ ಆವರಣದಲ್ಲಿ ಇರುವ ಮರಗಳು ಮಕ್ಕಳ ಕಲಿಕೆಗೆ ಸಹಕಾರಿಯಾಗಿದೆ. ಸಂಕಲನ ಮರ, ವ್ಯಯಕಲನ ಮರ ಏರಿಕೆ ಕ್ರಮ, ಇಳಿಕೆಯ ಕ್ರಮ ಮರಗಳು, ದಿಕ್ಕುಗಳ ಔತ್ರಿ ಅನೇಕ ವ್ಯರ್ಥ ವಸ್ತುಗಳನ್ನು ಬಳಸಿ ಮಕ್ಕಳು ಆಟದ ಜೊತೆ ಪಾಠ ಕಲಿಯಲು ಸಹಾಯಕವಾಗಿ ಆವರಣ ಮಾಡಲಾಗಿದೆ.

### ❖ ರಂಗಮಂದಿರ :–

ಶಾಲೆಯು ಸುಂದರ ರಂಗಮಂದಿರ ಹೊಂದಿದ್ದು ಇಲ್ಲಿ ಮಕ್ಕಳ ವಿವಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ.

### ❖ ಆಡುಗೆ ಕೋಣೆ ಮತ್ತು ಬಿಸಿಯೂಟ :–

ಆಡುಗೆಕೋಣೆಯು ವ್ಯಸ್ಥಿತವಾಗಿದ್ದು ಸ್ವಚ್ಚತೆಯನ್ನು ಕಾಪಾಡಿಕೊಳ್ಳಲಾಗುತ್ತದೆ. ಶಾಲೆಯಲ್ಲಿ ಬೆಲೆಯುವ ತರಕಾರಿ ಸೊಪ್ಪಗಳು ಬಿಸಿಯೂಟದ ರುಚಿ ಹೆಚ್ಚಿಸಿದೆ ಕನಿಷ್ಠ ತಿಂಗಳಿಗೆ 2 ಬಾರಿಯಾದರೂ ಬಾಳೆ ಎಲೆಯ ಸಿಹಿಯೂಟ ಮಕ್ಕಳಿಗೆ ಲಭ್ಯ, ತರೆಹೆವಾರಿ ಪಲ್ಯ,  ಉಪ್ಪಿನಕಾಯಿ ಊಟವು ಮಕ್ಕಳಿಗೆ ಲಭ್ಯ ನೇಫ್ರಾನ್ ಬಳಕೆ ಕಡ್ಡಯವಾಗಿದೆ. ಅಗ್ನಿನಂದಕವನ್ನು ಪ್ರತಿರ್ವ ರೀಪೀಲ್ ಮಾಡಿಸಿ ವ್ಯವಸ್ಥಿತಗೊಳಿಸಲಾಗಿದೆ.

### ❖ ಶೌಚಾಲಯ ವ್ಯವಸ್ಥೆ :–

ಬಾಲಕ – ಬಾಲಕಿಯರಿಗೆ ಪ್ರತ್ಯಕ ಶೌಚಾಲಯಗಳ ವ್ಯವಸ್ಥೆ ಇದೆ. 2019–20 ನೇ ಸಾಲಿನಲ್ಲಿ ದುರಸ್ಥಿ ಕಾರ್ಯ ಮಾಡಿಸಿ ಹೊಸ ಪಿಟ್ ಮಾಡಿಸಿ ರೈಲಿನ ಮಾದರಿ ಬಣ್ಣ ಮಾಡಿಸುವ ಕಾರ್ಯ ನಡೆಯುತ್ತಿದೆ. ಶೌಚಾಲಯದಲ್ಲಿ ಯಾವುದೇ ರೀತಿ ಮಲಿನವಾಗದಂತೆ ಸದಾ ನೀರು ಬರುವಂತೆ ನೆಲ್ಲಿಯ ವ್ಯವಸ್ಥೆ ಶೌಚೌಲಯಕ್ಕಿ ಕಲ್ಪಿಸಲಾಗಿದೆ.

### ❖ ಕುಡಿಯುವ ನೀರಿನ ವ್ಯವಸ್ಥೆ :–

ಶಾಲೆಯು ಸ್ವಂತ ಬೊರ್ವೆಲ್ ಹೊಂದಿದೆ ಆದರೆ ಆ ನೀರನ್ನು ಕೇವಲ ತೊಟಕ್ಕೆ ಮಾತ್ರ ಬಳಕೆಮಾಡಲಾಗುತ್ತದೆ. ಕಾರಣ ಆ ನೀರು ಕುಡಿಯಲು ಯೋಗ್ಯವಾಗಿಲ್ಲ. ಅದ್ದರಿಂದ ಗ್ರಾಮ ಪಂಚಾಯ್ತಿ ನೆರವಿನಿಂದ ಸಾರ್ವಜನಿಕ ನೆಲ್ಲಿತಂತೆ ಶಾಲೆಗೂ ನೀರಿನ ಕುಡಿಯುವ ವ್ಯವಸ್ಥೇ ಮಾಡಿಕೊಟ್ಟಿದ್ದಾರೆ. ಪ್ರತಿದಿನವೂ ಹೊಸ ನೀರು ಸಂಗ್ರಹಿಸಲಾಗುತತ್ತಿದೆ. ಹಾಗೂ ಫಿಲ್ಟರ್ ವ್ಯವಸ್ಥೆಯನ್ನು ಮಾಡಲಾಗಿದೆ.

### ❖ ವಿದ್ಯುತ್ ವ್ಯವಸ್ಥೆ :–

ಶಾಲೆಯು ವಿದ್ಯುತ್ ವ್ಯವಸ್ಥೆಯನ್ನು ಹೊಂದಿದೆ. ಬೋರ್ ವೆಲ್ ಬಳಕೆಗೆ ಶಾಲಾ ಕಂಪ್ಯೂಟರ್ ಬಳಕೆಗೆ ಅಗತ್ಯವಾಗಿದೆ.

## ಶೈಕ್ಷಣಿಕ ಸೌಲಭ್ಯಗಳು :–

### ❖ ಬೋಧನಾ ಕೊಠಡಿಗಳು :–

ಶಾಲೆಯು 2 ಕೊಠಡಿಗಳನ್ನು ಹೊಂದಿದೆ ಒಂದು ಕೊಠಡಿಯನ್ನು ಶಾಲಾ ಕಛೇರಿ ಮತ್ತು ಶಾಲಾ ತರಗತಿ ಕೊಠಡಿಯಾಗಿ ಮಾಡಿಕೊಳ್ಳಲಾಗಿದೆ. ಈ ಕೊಟಡಿ ಸುಂದವಾಗಿ ಕಾಣಲು 35 ಕ್ಕೂ ಹೆಚ್ಚು ಪೋಟೋಗಳನ್ನು ಜೋಡಣೆ ಮಾಡಲಾಗಿದೆ. ಮಕ್ಕಳಿಗೆ ಕುಳಿತುಕೊಳ್ಳಲು ಮಣಿ ವ್ಯವಸ್ಥೆ ಮಾಡಲಾಗಿದೆ. ಗಣಿತ ಕಲಿಕೋಪಕರಣಗಳನ್ನು ಮಕ್ಕಳಿಗೆ ಸಿಗುವಂತೆ ಜೋಡಿಸಲಾಗಿದೆ.

### ❖ ಕಂಪ್ಯೂಟರ್ ವ್ಯವಸ್ಥೆ :–

ಶಾಲೆಯಲ್ಲಿ ಒಂದು ಕಂಪ್ಯೂಟರ್ ವ್ಯವಸ್ಥೆ ಮಾಡಲಾಗಿದೆ ಇದನ್ನು ಇನ್ಫೋಸಿಸ್ ಮೂಲಕ ಅರ್ಜಿ ಸಲ್ಲಿಸಿ ಉಚಿತವಾಗಿ ಪಡೆದುಕೊಳ್ಳಲಾಗಿದೆ. ವಿವಿಧ ತರಗತಿಗಳ ವಿಷಯಗಳ ಬೋಧನೆಯ ವೇಳೆ ಕಂಪ್ಯೂಟರ್ ಬಳಸಿ ಹೃದಯ ಶ್ವಾಸಕೋಶ ಇಂಗ್ಲೀಷ್ ಹಾಡು ಕಥೆ, ವಿವಿಧ ವಿಡಿಯೋ ಬಳಸಿ ಪರಿಣಾಮಕಾರಿ ಬೋಧನೆಗೆ ಬಳಸಿಕೋಳ್ಳಲಾಗುತ್ತಿದೆ.

### ❖ ಗ್ರಂಥಾಲಯ ವ್ಯವಸ್ಥೆ :–

ಕೊಠಡಿಯ ಒಂದು ಜಾಗದಲಲಿ ರ್‍ಯಾಕ್ ಇಡಲಾಗಿತ್ತು ಅಲ್ಲಿ ಗ್ರಂಥಾಲಯದ ಪುಸ್ತಕಗಳನ್ನು ಜೋಡಿಸಲಾಗಿದೆ. ಮಕ್ಕಳು ತಮಗೆ ಇಷ್ಟವಾದ ಪುಸ್ತಕ ತೆಗೆದುಕೊಂಡು ಓದಿ ಪುಸ್ತಕದಲ್ಲಿ ಹೆಸರು ನಮೂದಿಸಿ ಇಡುವ ವ್ಯವಸ್ಥೆ ಮಾಡಲಾಗಿದೆ.

### ❖ ಪ್ರಾರ್ಥನೆ :–

ಪ್ರತಿದಿನ ಪ್ರತಿ ಒಬ್ಬ ಮಗುವು ಪ್ರಾರ್ಥನೆಯ ನಂತರ ಅಂದಿನ ಪಂಚಾಂಗ ಪಠನ ಗಾದೆ ಮಾತು ವಾರ್ತೆ ಓದು ಪುಸ್ತಕ ಪರಿಚಯ ಕನ್ನಡದ ನುಡಿಮುತ್ತು ದಿನಕ್ಕೋಂದು ಪ್ರಶ್ನೆ ಕೇಳು ಚಟುವಟಿಕೆ ಮಾಡಲಾಗುತ್ತದೆ.

### ❖ ಹೊರ ಸಂಚಾರ :–

ಪ್ರತಿವರ್ಷವು ಶಾಲಾ ಮಕ್ಕಳು ಪೋಷಕರೊಂದಿಗೆ ಹೊರ ಸಂಚಾರಕ್ಕೆ ಹೋಗುವ ವ್ಯವಸ್ಥೆ ಇದರ ಉದ್ದೇಶ. ಪಾಲಕ ಪೋಷಕರನ್ನು ಸರಿಯಾಗಿ ಶಾಲಾ ಅಭಿವೃದ್ಧಿಗೆ ಕೈಜೋಡಿಸಲು ಮಕ್ಕಳಿಗೆ ಕಲಿಕಾ ವಿಷಯಗಳನ್ನು ತೊರಿಸಲು ಸಹಾಯಕ ಹಾಗೇಯೆ ಅಲ್ಲಿಯೇ ಸ್ಥಳಿಯ ಆಲೆ ಮನೆ ಬೇಟಿ. ಭತ್ತದ ನಾಟಿ ಮಾಡುವ ಕಾರ್ಯಗಳಲ್ಲಿ ಹೋಗಿ ವೀಕ್ಷಿಸುವ ಕಾರ್ಯಕ್ರಮಗಳು ಜರುಗುತ್ತವೆ.

### ❖ ನಲಿ ಕಲಿ ಕೊಠಡಿ :–

ನಮ್ಮ ಶಾಲೆಯ ನಲಿ ಕಲಿ ಕೊಠಡಿಯು ಶಾಲೆಯ ಮುಖ್ಯ ಆಕರ್ಷಣೆಯಾಗಿದೆ. ಮಕ್ಕಳ ಪಾಲಕರು ಆ ಕೊಠಡಿಯೊಳಗೆ ಬಂದಾಗ ಅದನ್ನು ನೋಡಿ ಶ್ಲಾಘಿಸುವ ಕಾರ್ಯ ಸದಾ ನಡೆಯುತ್ತದೆ. ಮೂರು ವರ್ಷಗಳ ಹಿಂದೆ ಮಣ್ಣಿನ ಗೊಡೆಯಿಂದ ಕೊಠಡಿಯ ನಲಿ ಕಲಿ ಚಪ್ಪರದ ತಂತಿಯು ನಿಲ್ಲದ ಸ್ಥಿತಿಯಲ್ಲಿತ್ತು. ಮೇಲ್ಚಾವಣಿಯಿಂದ ಗೆದ್ದಲು ಬಿಳುತ್ತಿತ್ತು. ಎಷ್ಟೋ ಬಾರಿ ಚಪ್ಪರ ಬಿದ್ದಿದ್ದು ಒಂಟು ಕಾರ್ಡಗಳು ನಲಿ ಕಲಿ ಬ್ಯಾಗ್ ಗಳನ್ನು ಗೆದ್ದಲು ತಿಂದು ಹಾಕಿವೆ. ಅಂತಹ ಕೊಠಡಿ ಇಂದು ಸಂಮೃದ್ದವಾಗಿದೆ. ಆ ಕಾರ್ಯದ ಕಡೆ ನೋಡಿದರೆ ಸರ್ಕಾರವು ನಮ್ಮ ಶಾಲೆಗೆ 1.50.000 ರೂ ಮಂಜೂರು ಮಾಡಿತು. ಈ ಃಣದಲ್ಲಿ ಆ ಕೊಠಡಿಯ ಮರದ ಮೇಲ್ಚಾವಣಿ ಕಬ್ಬಿಣದ ಮಾಳಿನಿಂದ ಬದಲಾಯಿತು. ಆದರೆ ನಮ್ಮ ಮಣ್ಣಿನ ಗೋಡೆ ಸಮಸ್ಯೆ ಹಾಗೇಯೇ ಉಳಿಯಿತು. ಆದರೆ ಗ್ರಾಮಸ್ಥರು ದಾನಿಗಳ ನೆರವಿನಿಂದ ಸುಮಾರು 50.000 ರೂ ವೆಚ್ಚ ಆಗಬಹುದಾದ ದುರಸ್ಥಿ ಕಾರ್ಯ ಸಿಮೆಂಟ್ ಪ್ಲಾಸ್ಟರ್ ಕಾರ್ಯ ಬಣ್ಣದ ಕಾರ್ಯ ಮಾಡಿಸಿ ಸಮಸ್ಯಗೆ ತಿಲಾಂಜಲಿ ಹಾಡಲಾಯಿತು.

## ನಲಿ–ಕಲಿಕೊಠಡಿ ವಿಶೇಷತೆಗಳು :–

### ❖ ವಾಲ್ ಸ್ಲೇಟ್ :–

ಪ್ರತಿಮಗುವಿಗೂ ಸುಂದರ ವಾಲ್ ಸ್ಲೇಟ್ ಅಲ್ಲಿ ಆ ಮಗುವಿಗೊಂದು ಬಾಕ್ಸ್ ಇಡಲಾಗಿದ್ದು ಅದರಲ್ಲಿ ಪೆನ್ನು ಪೆನ್ಸಿಲ್ ಬಳಪ ಬಟ್ಟೆ ರಬ್ಬರ್ ಶಾಶ್ವತವಾಗಿ ಇಡುವ ಮೂಲಕ ವ್ಯವಸ್ಥಿತಗೊಳಿಸಲಾಗಿದೆ.

### ❖ ಸುಂದರ ಚಪ್ಪರ :–

ಸುಂದರ ಚಪ್ಪರ ಹೊಂದಿದ್ದು ಮಕ್ಕಳ ಕ್ರಾಫ್ಟ್ ಚಟುವಟಿಕೆ ಹಾಕಲಾಗಿದೆ. ವಿಶೇಷವಾಗಿ ಚಪ್ಪರದಲ್ಲಿ 2 ಮತ್ತು 3 ನೇ ತರಗತಿ ಸಂಪೂರ್ಣ ಇಂಗ್ಲೀಷ್ ಪದ ಬರೆಯಲಾಗಿದೆ.

### ❖ ಪಪೆಟ್ ಶೋ :–

ಬಟ್ಟೆಯ ಬದಲು ಪೈಬರ್ ಶೀಟ್ ಬಳಸಿ ಸುಂದರ ಪಪೆಟ್ ಶೋ ಮತ್ತುನ ಗೊಂಬೆಗಳ ವ್ಯವಸ್ಥೆ ಮಾಡಲಾಗಿದೆ.

### ❖ ಮುಖವಾಡ ಮತ್ತು ಕಿರೀಟಗಳು : –

ಸುಮಾರು 20 ಮುಖವಾಡ ಪ್ರತಿ ಮಗುವಿಗೂ ತರಗತಿಯಲ್ಲಿ ಹಾಕಿಕೊಳ್ಳಲು ಕಿರೀಟಗಳ ವ್ಯವಸ್ಥೆ ಮಾಡಲಾಗಿದೆ.

### ❖ ಗೊಂಬೆಗಳು : – ನಲಿ ಕಲಿ ಕೊಠಡಿಯಲ್ಲಿ ಬುದ್ಧ ಗಾಂಧೀಜಿ ಸರಸ್ವತಿ ಲಕ್ಷ್ಮೀ, ಶಾಲೆಯ ಮಾದರಿ ಎತ್ತಿನಗಾಡಿ, ಬಾತು ಕೋಲಿ ಗಿಳಿ ಗಣೇಶ ಮುಂತಾದ ಮಣ್ಣಿನ ಮಾದರಿಗಳನ್ನು ಅಚ್ಚು ಕಟ್ಟಾಗಿ ಜೋಡಿಸಲಾಗಿದೆ.

### ❖ ಪಾಠೋಪಕರಣ ನಲಿಕಲಿ ಕಿಟ್ ಜೋಡಣೆ.: –

**ನಲಿ ಕಲಿಯಲ್ಲಿ ಬರುವ ಕನ್ನಡ ಗಣಿತ ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ ಮರದ ರ್‍ಯಾಕ್ ಮಾಡಿಸಿ ಮೈಲಿಗಲ್ಲುವಾರು ಪಾಠೋಪಕರಣ ಪ್ರಯೋಗ ಪೆಟ್ಟಿಗೆ ಜೋಡಿಸಲಾಗಿದೆ.**

### ❖ ವಾಚಕಗಳ ಜೋಡನೆ :–

**ಗೋಡೆಗೆ ರೀಪ್ ಅಳವಡಿಸಿ ತರಗತಿ ಸುಂದವಾಗಿ ಕಾಣುವಂತೆ ವಾಚಕಗಳನ್ನು ಜೋಡಿಸಲಾಗಿದೆ.**

### ❖ ನಲಿ ಕಲಿ ಟೇಬಲ್ :–

**ಈ ಹಿಂದೆ ಸುಂದವಾಗಿ ವೃಗಳನ್ನು ರಚಿಸಿ ನಲಿ ಕಲಿ ತಟ್ಟೆ ಹಾಕಲಾಗುತ್ತಿತ್ತು ಆದರೆ ಈಗ ದಾನಿಗಳಿಂದ ಹಣ ಸಂಗ್ರಹಿಸಿ ನಲಿ– ಕಲಿ ಟೇಬಲ್ ತರಲಾಗುತ್ತಿದೆ.**

## ಶಾಲೆಯ ನಾವಿನ್ಯಮಯ ವಿಶೇಷತೆಗಳು

1) ಸಮವಸ್ತ್ರ : – ಶಾಲೆಯ 2 ರೀತಿಯ ಸಮವಸ್ತ್ರ ಹೊಂದಿದೆ. ಅದರಲ್ಲಿಯೂ ಬ್ಲೇಜರ್ ಮಾದರಿಯ ಉಡುಪು ಖಾಸಗಿ ಶಾಲೆಗಿಂತ ನಮ್ಮ ಶಾಲೆ ಕಡಿಮೆ ಇಲ್ಲ ಎಂಬುದನ್ನು ಸಾರುತ್ತದೆ. ಇದು ಮಕ್ಕಳಿಗೂ ಪೋಷಕರಿಗೂ ಇಷ್ಟದ ಸಂಗತಿಯಾಗಿದೆ.

2) ಉಚಿತ ಐಡಿ ಕಾರ್ಡ ಟೈ ಬೆಲ್ಟ್ ವಿತರಣೆ :– ದಾನಿಗಳ ನೆರವಿನಿಂದ ಈ ವರ್ಷ ಮಕ್ಕಳಿಗೆ ಉಚಿತ ಟೈ ಬೆಲ್ಟ್ ಐಡಿ ಕಾರ್ಡ ನೀಡಲಾಗಿದೆ.

3) ಉಚಿತ ಪಠ್ಯಪುಸ್ತಕ ನೋಟ್ ಪುಸ್ತಕ ಸಾಮಾಗ್ರಿ ವಿತರಣೆ;– ಸರ್ಕಾರ ನೀಡುವ ಉಚಿತ ಪಠ್ಯಪುಸ್ತಕದೊಂದಿಗೆ ಈ ವರ್ಷ ಎಲ್ಲಾ ಮಕ್ಕಳಿಗೂ ವರ್ಷಕ್ಕೆ ಸಾಗುವಷ್ಟು ನೋಟ್ ಪುಸ್ತಕ ಪೆನ್ನು ಪೆನ್ಸಿಲ್ ರಬ್ಬರ್ ಅನ್ನು ದಾನಿಗಳು ಸಂಘ ಸಂಸ್ಥೆಗಳಿಂದ ನೀಡಲಾಗಿದೆ.

4) ಸಾಂಸ್ಕೃತಿಕ ಕಾರ್ಯಕ್ರಮಗಳು :– ಪ್ರತಿ ಶುಕ್ರವಾರವು ಶಾಲೆಯಲ್ಲಿ ಸರಸ್ವತಿ ಪೂಜೆ ಕಾಯ್ಕ್ರಮ ಮಾಡುವ ಪದ್ಧತಿ ಇದ್ದು ಅಂದು ಮಕ್ಕಳು ಹಾಡುಗಳು ಕಥೆಗಳು ನೃತ್ಯ ನಾಟಕ ಮುಂತಾದ ಚಟುವಟಿಕೆ ಕೊನೆಯ 2 ಅವಧಿ ಮೀಸಲು ಇಡಲಾಗಿದೆ ಜೊತೆಗೆ ಪ್ರತಿಭಾ ಕಾರಂಜಿಯಂತಹ ಕಾಯ್ಕ್ರಮಗಳಲ್ಲಿಯೂ ಭಾಗವಹಿಸಿ ಪ್ರಶಸ್ತಿ ಪಡೆದಿರುತ್ತಾರೆ.

5) ಶಾಲಾ ವಾಷಿಕೋತ್ಸವ ಪಿಠೋಪಕರಣ ಮೇಳ:– ಈ ಹಿಂದಿನ ವರ್ಷ ದಾನಿಗಳಿಂದ ಗ್ರಾಮಸ್ಥರ ಸಹಾಯದಿಂದ ಅದ್ದೂರಿಯಾಗಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಮತ್ತು ಕಲಿಕೋಪಕರಣ ಮೇಳ ಮಾಡಲಾಗಿದೆ. ಈ ಕಲಿಕೋಪಕರಣ ಮೇಳದಲ್ಲಿ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಶಿಕ್ಷಕರು ಮಾಡಿದ ಕಲಿಕೋಪಕರಣಗಳನ್ನು ಪ್ರಧರ್ಶಿಸಲಾಯಿತು. ಜೊತೆಗೆ ಅಂದಿನ ಈ ಕಾರ್ಯಕ್ರಮಕ್ಕೆ ಕ್ಲಸ್ಟರ್ ನ ಎಲ್ಲಾ ನಲಿ ಕಲಿ ಮಕ್ಕಳು ಮತ್ತು ಶಿಕ್ಷಕರು ವಿಕ್ಷಣೆಗೆ ಬಂದಿದ್ದರು. ಅಲ್ಲದೆ ಈ ಕಲಿಕೋಪಕರಣಗಳನ್ನು ಹೇಗೆ ಬಳಸಬೇಕೆಂದು ಮಕ್ಕಳೇ ಶಿಕ್ಷಕರಿಗೆ ಮತ್ತು ಗ್ರಾಮಸ್ಥರಿಗೆ , ಇಲಾಖಾ ಅಧಿಕಾರಿಗಳಿಗೆ ವಿವರಿಸಿ ತಿಳಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.

6) You tube ಚಾನೆಲ್ :–

ಶಾಲೆಯಲ್ಲಿ 400 ಕ್ಕೂ ಹೆಚ್ಚಿನ ಕಲಿಕೋಪಕರಣಗಳು ಇದ್ದು ಇವುಗಳನ್ನು ಹೇಗೆ ಯಾವ ವಿಷಯಕ್ಕೆ ಬಳಸಬೇಕು ಎಂಬುದಾಗಿ ಮಕ್ಕಲ ವಿವಿಧ ಚಟುವಟಿಕೆಗಳ ವಾಚನಗಳ 130 ಕ್ಕೋ ಹೆಚ್ಚಿನ ವೀಡಿಯೋಗಳು “ ‘ ಅಲ್ಲಿ ಲಭ್ಯವಿದ್ದು ಇಲಿಯ ಕಲಿಕೋಪಕರಣಗಳು ರಾಜ್ಯದ ಅನೇಕ ಶಿಕ್ಷಕರಿಗೆ ಮಾದರಿಯಾಗಿವೆ. ಪೋಷಕರು ಇಲ್ಲಿ ತಮ್ಮ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳನ್ನು ವೀಕ್ಷಿಸಿ ಮೆಚ್ಚುಗೆ ಸೂಚಿಸಿರುತ್ತಾರೆ.

7) ವಿಶೇಷ ಬಣ್ಣ ;–

ಶಾಲೆಯ ಕೊಠಡಿಗಳ ಹೊರಭಾಗಕ್ಕೆ ಬಣ್ಣ ಬಳಿದು ಸುಮಾರು ವರ್ಷಗಳಗಿತ್ತು. ದಾನಿಗಳ ನೆರವಿನಿಂದ ಹಣ ಒಟ್ಟು ಗೂಡಿಸಿ ರೈಲಿನ ಮಾದರಿಯ ಬಣ್ಣ ಹಚ್ಚಿಸಲಾಗುತ್ತದೆ. ಇದು ಇಲ್ಲಿಯ ಮಕ್ಕಳಿಗೆ ಪೋಷಕರಿಗೆ ಆಕರ್ಷಿಣಿಯವಾಗಿದೆ. ಇದರ ಜವಾಬ್ದಾರಿ ಬಣ್ಣದ ಚಿತ್ತಾರ ಕಾರ್ಯವು ಶಿಕ್ಷಕರಿಂದಲೇ ಆಗುತ್ತಿದೆ. ಈ ಕಾರ್ಯ ಈಗ ನೆಡೆಯುತ್ತಿದೆ.

## ಶಾಲೆಗೆ ಸಂದ ಗೌರವ ಪ್ರಶಸ್ತಿಗಳು

- 2018–19 ನೇ ಸಾಲಿನ ತಾಲೂಕಿನ ಉತ್ತಮ ಕಿರಿಯ ಪ್ರಾಥಮಿಕ ಶಾಲೆ ಪ್ರಶಸ್ತಿ ಪಡೆದು ಗ್ರಾಮಸ್ಥರ ಖುಷಿಗೆ ಕಾರಣವಾಗಿದೆ,

➢ 2018–19 ನೇ ಸಾಲಿನ  ಶಿವಮೊಗ್ಗ ಜಿಲ್ಲಾ ಮಟ್ಟದ ಪರಿಸರ ಮಿತ್ರ ಕಾರ್ಯಕ್ರಮದಡಿ ಹಳದಿ ಶಾಲೆ ಪ್ರಶಸ್ತಿ ಪಡೆದಿದೆ.

➢ 2018ರಲ್ಲಿ “ONE INDIA” ಆನ್ ಲೈನ್ ಪಟ್ಟಿಯಲ್ಲಿ ನಮ್ಮ ಶಾಲೆ ಮತ್ತು ಶಿಕ್ಷಕರ ದಿನಾಚರಣೆಯ ಕುರಿತು ಲೇಖನ ಪ್ರಕಟಿಸಲಾಗಿದೆ.

## ಮುಂದಿನ ಗುರಿಗಳು (ಕನಸುಗಳು)

- **ಮುಖ್ಯ ಪ್ರವೇಶ ದ್ವಾರಕ್ಕೆ ಕಮಾನು ಮಾಡಿಸುವುದು.**
- **ಶುದ್ಧ ಕುಡಿಯುವ ನೀರಿನ ಎಲೆಕ್ಟ್ರಾನಿಕ್ ಯಂತ್ರ ಅಳವಡಿಕೆ**
- **ಪುಸ್ತಕ ಮಳಿಗೆ ಅಥಾವ ಅಂಗಡಿ ತೆರೆಯುವಿಕೆ.**
- **ಮಕ್ಕಳ ಬ್ಯಾಂಕ್ ತೆರೆಯುವಿಕೆ.**
- **ಮಕ್ಕಳ ಓದು ಕುಟಿರ ಮಾಡುವಿಕೆ.**
- **ಸರಸ್ವತಿ ವಿಗ್ರಹ ಪ್ರತಿಷ್ಠಾಪನೆ.**

**ಉಪ ಸಂಹಾರ :–** **“ನಮ್ಮ ಶಾಲೆ, ನಮ್ಮ ಹೆಮ್ಮೆ ನಮ್ಮ ಕನಸು”** **ಕಾರ್ಯಕ್ರಮದಡಿ ಹಳೆಕನಸು ಈಡೆರಿದಂತೆ ಹೊಸ ಕನಸು ಹುಟ್ಟಿಕೊಳ್ಳುತ್ತದೆ. ಇದು ಮತ್ತೊಂದು ಮೈಲಿಗಲ್ಲು ಬುನಾದಿಯಾಗುತ್ತದೆ.**













2020.09.12 11:12






read a book
fly a kite
News papers